ಕಲ್ಪತರು ವಿದ್ಯಾ ಸಂಸ್ಥೆ (ರಿ.) ತಿಪಟೂರು.

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು

## ತಿಪಟೂರು.

2016-17 ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ., ಎನ್.ಎಸ್.ಎಸ್., ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್ ಕ್ರಾಸ್, ಇಕೋ ಕ್ಲಬ್ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ

# ಪ್ರತಿಭಾಶ್ರೀ – 2017

**ದಿನಾಂಕ 06-04-2017 ನೇ ಗುರುವಾರ**

**ಸಮಯ :** ಬೆಳಿಗ್ಗೆ 11-00 ಗಂಟೆ. **ಸ್ಥಳ :** ಸೆಮಿನಾರ್ ಹಾಲ್

ಅಧ್ಯಕ್ಷತೆ : **ಶ್ರೀ ಪಿ.ಕೆ. ತಿಪ್ಪೇರುದ್ರಪ್ಪನವರು**
ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.

ಮುಖ್ಯ ಅತಿಥಿಗಳು : **ಶ್ರೀಮತಿ ಶಿಲ್ಪಾ ಆರ್.,** ಕೆ.ಎ.ಎಸ್.,
ಉಪವಿಭಾಗಾಧಿಕಾರಿಗಳು
ತಿಪಟೂರು.

**ಪ್ರೊ. ಜಿ. ವೆಂಕಟೇಶ್ ಕುಮಾರ್**
ಪ್ರಾಧ್ಯಾಪಕರು, ಮನಃಶಾಸ್ತ್ರ ವಿಭಾಗ
ಮಾನಸ ಗಂಗೋತ್ರಿ, ಮೈಸೂರು.

**ವಿಶೇಷ ಆಹ್ವಾನಿತರು :**

ಉಪಾಧ್ಯಕ್ಷರುಗಳು, ಕ.ವಿ.ಸಂಸ್ಥೆ :
**ಶ್ರೀ ಎಚ್.ಎಚ್. ನಟರಾಜ್**
**ಶ್ರೀ ಜಿ.ಕೆ. ಪ್ರಭು**
**ಶ್ರೀ ಎ.ಎಂ. ಚಂದ್ರಶೇಖರಯ್ಯ**

ಕಾರ್ಯದರ್ಶಿಗಳು, ಕ.ವಿ.ಸಂಸ್ಥೆ :
**ಪ್ರೊ. ರಾಜಕುಮಾರ್**
**ಶ್ರೀ ಬಿ.ಆರ್. ವಿಶ್ವನಾಥ್**
**ಶ್ರೀ ಕೆ.ಪಿ.ರುದ್ರಮುನಿಸ್ವಾಮಿ**
**ಶ್ರೀ ಟಿ.ಯು.ಜಗದೀಶ್‌ಮೂರ್ತಿ**

**ಶ್ರೀ ಟಿ.ಎಚ್. ಶಿವಪ್ರಸಾದ್**
ಖಜಾಂಚಿಗಳು, ಕ.ವಿ.ಸಂಸ್ಥೆ.

## ಸರ್ವರಿಗೂ ಹಾರ್ದಿಕ ಸ್ವಾಗತ

**ಪ್ರೊ. ವೈ.ಪಿ. ಶಿರೂರ್,** ಎಂ.ಎಸ್ಸಿ.,
ಪ್ರಾಂಶುಪಾಲರು
ಬೋಧಕರು, ಬೋಧಕೇತರರು ಮತ್ತು ವಿದ್ಯಾರ್ಥಿ ವೃಂದ
ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

Scanned with OKEN Scanner

# ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಗುರುತಿಸಿ

## ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಪ್ರೊ. ವೆಂಕಟೇಶ್ ಕುಮಾರ್ ಪೋಷಕರಿಗೆ ಸಲಹೆ

• **ಕನ್ನಡಪ್ರಭ ವಾರ್ತೆ** ತಿಪಟೂರು

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ತನ್ನದೇ ಆದ ಪ್ರತಿಭೆ ಅಡಗಿರುತ್ತದೆ ಅದನ್ನು ಗುರುತಿಸುವ ಮೂಲಕ ಪ್ರೋತ್ಸಾಹಿಸುವ ಜವಾಬ್ದಾರಿ ಪೋಷಕರು ಮತ್ತು ಉಪನ್ಯಾಸಕರದ್ದಾಗಿದೆ ಎಂದು ಮೈಸೂರು ಮಾನಸ ಗಂಗೋತ್ರಿಯ ಮನಃಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಜಿ ವೆಂಕಟೇಶ್‌ಕುಮಾರ್ ತಿಳಿಸಿದರು.

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್‌ಸಿಸಿ, ಎನ್‌ಎಸ್‌ಎಸ್ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್‌ಕ್ರಾಸ್, ಇಕೋ ಕ್ಲಬ್ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಮತ್ತು ಪ್ರತಿಭಾಶ್ರೀ ಸಮಾರಂಭ ಉದ್ಘಾಟಿಸಿ ಮಾತನಾಡಿ, ತಮ್ಮಲ್ಲಿರುವ ಪ್ರತಿಭೆಗಳನ್ನು ಕೇವಲ ಉದ್ಯೋಗಕ್ಕೆ ಮಾತ್ರ ಸೀಮಿತಗೊಳಿಸದೆ, ಸಾಮಾಜಿಕ ಕಳಕಳಿಗಾಗಿ ಅನಾವರಣ ಮಾಡಿದರೆ ಉತ್ತಮ ಬದುಕು ಕಂಡುಕೊಳ್ಳಲು ಸಾಧ್ಯ. ಸಮಾಜಕ್ಕೆ ಪೂರಕವಾದಂತಹ ಪ್ರತಿಭೆಗಳನ್ನು ಬೆಳೆಸಿಕೊಂಡರೆ ಒಂದಲ್ಲೊಂದು ದಿನ ಖಂಡಿತ ಪ್ರಾಮುಖ್ಯತೆ ಲಭಿಸುತ್ತದೆ ಎಂದರು. ಜನ ಮೆಚ್ಚಿದ ಶಿಕ್ಷಕರಾಗುವ ಬದಲು ವಿದ್ಯಾರ್ಥಿಗಳು ಮೆಚ್ಚಿದ ಶಿಕ್ಷಕರಾಗಬೇಕು. ಆಗ ಮಾತ್ರ ಸಮಾಜದಲ್ಲಿ ಉತ್ತಮ ಶಿಕ್ಷಕ ಅನಿಸಿಕೊಳ್ಳಲು ಸಾಧ್ಯ. ಶಿಕ್ಷಕರ ಗುರಿ ಉತ್ತಮ ಮಟ್ಟದ್ದಾಗಿದ್ದರೆ ವಿದ್ಯಾರ್ಥಿಗಳ ಜೀವನ ಹಸನಾಗುತ್ತದೆ ಎಂದರು.



ಪ್ರತಿಭಾಶ್ರೀ ಉದ್ಘಾಟನಾ ಸಮಾರಂಭದಲ್ಲಿ ಮೈಸೂರು ಮಾನಸ ಗಂಗೋತ್ರಿಯ ಮನಃಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಜಿ ವೆಂಕಟೇಶ್‌ಕುಮಾರ್, ಉಪವಿಭಾಗಾಧಿಕಾರಿ ಆರ್. ಶಿಲ್ಪಾ ಮತ್ತಿತರರು.

ಉಪವಿಭಾಗಾಧಿಕಾರಿ ಆರ್.ಶಿಲ್ಪಾ ಮಾತನಾಡಿ, ಕ್ಷಿಪ್ರಗತಿಯಲ್ಲಿ ಸಾಗುತ್ತಿರುವ ಸ್ಪರ್ಧಾ ಜಗತ್ತಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಭೌದ್ಧಿಕ ಹಾಗೂ ಮಾನಸಿಕವಾಗಿ ಸಿದ್ಧರಾಗಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಕಾಣಲು ಸಾಮಾನ್ಯ ಜ್ಞಾನದ ಜತೆಗೆ ಪ್ರಸ್ತುತ ವಿದ್ಯಮಾನಗಳ ಅರಿವು ಬಹಳ ಅತ್ಯವಶ್ಯಕ. ವಿದ್ಯಾರ್ಥಿ ದಿಸೆಯಲ್ಲಿಯೇ ವ್ಯಕ್ತಿತ್ವ ವಿಕಸನ, ಮೌಲ್ಯಾಧಾರಿತ ಬದುಕನ್ನು ಕಂಡುಕೊಂಡರೆ ಭವಿಷ್ಯದ ಬದುಕು ಉತ್ತಮವಾಗಿರುತ್ತದೆ ಎಂದರು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕೆಂಬುದರ ಬಗ್ಗೆ ವಿದ್ಯಾರ್ಥಿಗಳಿಗೆ ಸವಿವರವಾಗಿ ತಿಳಿಸಿಕೊಟ್ಟರು.

ಕೆವಿಎಸ್ ಅಧ್ಯಕ್ಷ ಟಿ ಕೆ ತಿಪ್ಪೇರುದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ವಾರ್ಷಿಕ ವರದಿಯನ್ನು ಪ್ರಾಂಶುಪಾಲ ವೈ.ಪಿ. ಶಿರೂರ್ ಹಾಗೂ ಕ್ರೀಡಾ ವರದಿಯನ್ನು ಪ್ರೊ. ಗೋವಿಂದರಾಜು ಮಂಡಿಸಿದರು. ಸಮಾರಂಭದಲ್ಲಿ ಕೆವಿಎಸ್ ಕಾರ್ಯದರ್ಶಿಗಳಾದ ಪ್ರೊ. ರಾಜಕುಮಾರ್, ಕೆ.ಪಿ. ರುದ್ರಮುನಿಸ್ವಾಮಿ, ಟಿ.ಯು. ಜಗದೀಶ್‌ಮೂರ್ತಿ, ಪಲ್ಲಾಗಟ್ಟಿ ಅಡವಪ್ಪ ಕಾಲೇಜಿನ ಪ್ರಾಂಶುಪಾಲ ವಿದ್ವಾನ್ ಆರ್‌ಎಸ್ ಸದಾಶಿವಯ್ಯ, ನಿವೃತ್ತ ಸಸ್ಯಶಾಸ್ತ್ರ ವಿಭಾಗದ ನಾರಾಯಣಪ್ಪ, ಉಪನ್ಯಾಸಕರುಗಳಾದ ಪ್ರೊ.ಭೈರಪ್ಪ, ಪ್ರೊ.ಶೈಲಜಾ, ಪ್ರೊ. ವೀರಣ್ಣ, ಪ್ರೊ.ಶಿವಣ್ಣ, ಪ್ರೊ.ಬಸವರೆಡ್ಡಿ, ಪ್ರೊ. ಶಶಿಕಲಾ, ಪ್ರೊ.ಪ್ರಕಾಶ್, ಪ್ರೊ.ಜಗದೀಶ್ ಸೇರಿದಂತೆ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

Kannada Prabha (Daily)

Date: 08.04.2017

**TITLE OF THE ACTIVITY/EVENT: Inauguration Day**

***DATE- 8-4-2017***

**DESIGNATION OF THE RESOURCE PERSON:**

**Prof. Venkatesh Kumar,** Department of Psychology, Manasa Gangotri, Mysore.

**Ms. Shilpa,** Assistant Commissioner, Tiptur.

**REPORT:** Prof. Venkatesh Kumar said every child has a unique talent that teachers and parents should recognize and encourage. He also noted that the student's skills should not be used just for jobs but also for the development and concern towards society. He believed that talent should be honed to be helpful to the community, and the recognition will come on its own. Teachers should commit to quality education then students' life will be beautiful. More than people, students ~~should~~ adore their teachers; only then can they be called good teachers.

Miss Shilpa spoke about the progress and the competition in society, and the students should be ready physically and psychologically. In the present scenario, academic knowledge and current affairs are necessary. Personality development and life based on values can better one's future. She gave pointers to ace the competitive exams. KVS President Sri Thipperudrappa presided over the function, and the principal, Prof.Y.P. Shirur, read the annual report. Secretaries Prof. Rajkumar, Sri. K.P. Rudramuniswamy, Sri.T.U. Jagadeesh Murthy, teaching and non-teaching faculty and students were present.

Scanned with OKEN Scanner

ಕಲ್ಪತರು ವಿದ್ಯಾ ಸಂಸ್ಥೆ (ರಿ.) ತಿಪಟೂರು.

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು

(ನ್ಯಾಕ್‌ನಿಂದ "A" ಶ್ರೇಣಿ ಪುರಸ್ಕೃತ - (CGPA - 3.07 ಅಂಕಗಳು)

**ತಿಪಟೂರು.**

2017-18 ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ., ಎನ್.ಎಸ್.ಎಸ್., ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಇಕೋ ಕ್ಲಬ್, ಯುವ ರೆಡ್ ಕ್ರಾಸ್ ಮತ್ತು ಕ್ರೀಡಾ ಚಟುವಟಿಕೆಗಳ

# ಉದ್ಘಾಟನಾ ಸಮಾರಂಭ

**ದಿನಾಂಕ : 23-8-2017 ನೇ ಬುಧವಾರ**

ಸಮಯ :
ಬೆಳಿಗ್ಗೆ 11-00 ಗಂಟೆಗೆ.

ಸ್ಥಳ :
ಸೆಮಿನಾರ್ ಹಾಲ್

ಅಧ್ಯಕ್ಷತೆ : **ಶ್ರೀ ಪಿ.ಕೆ. ತಿಪ್ಪೇರುದ್ರಪ್ಪ**
ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.

ಮುಖ್ಯ ಅತಿಥಿಗಳು: **ಶ್ರೀ ಟಿ.ಎಸ್. ನಾಗರಾಜಶೆಟ್ಟಿ**
ನಿವೃತ್ತ ಪ್ರಾಂಶುಪಾಲರು
ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು, ತಿಪಟೂರು.

**ವಿಶೇಷ ಆಹ್ವಾನಿತರು :**

ಉಪಾಧ್ಯಕ್ಷರುಗಳು, ಕ.ವಿ.ಸಂಸ್ಥೆ :
ಶ್ರೀ ಎಸ್.ಎಸ್. ನಟರಾಜ್
ಶ್ರೀ ಜಿ.ಕೆ. ಪ್ರಭು
ಶ್ರೀ ಎ.ಎಂ. ಚಂದ್ರಶೇಖರಯ್ಯ

ಕಾರ್ಯದರ್ಶಿಗಳು, ಕ.ವಿ.ಸಂಸ್ಥೆ :
ಪ್ರೊ. ರಾಜಕುಮಾರ್
ಶ್ರೀ ಬಿ.ಆರ್. ವಿಶ್ವನಾಥ್
ಶ್ರೀ ಕೆ.ಪಿ.ರುದ್ರಮುನಿಸ್ವಾಮಿ
ಶ್ರೀ ಟಿ.ಯು.ಜಗದೀಶ್‌ಮೂರ್ತಿ

ಶ್ರೀ ಟಿ.ಎಸ್. ಶಿವಪ್ರಸಾದ್
ಖಜಾಂಚಿಗಳು, ಕ.ವಿ.ಸಂಸ್ಥೆ.

## ಸರ್ವರಿಗೂ ಹಾರ್ದಿಕ ಸ್ವಾಗತ

ಪ್ರೊ. ವೈ.ಪಿ. ಶಿರೂರ್, ಎಂ.ಎಸ್ಸಿ.,
ಪ್ರಾಂಶುಪಾಲರು
ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿ ವೃಂದ
ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.


Scanned with OKEN Scanner

# ಶಿಕ್ಷಣ ಪ್ರಜ್ಞೆಯಿಂದ ಮೌಲ್ಯಾಧಾರಿತ ಬದುಕು

ತಿಪಟೂರು: ಕ್ಷಿಪ್ರಗತಿಯಲ್ಲಿ ಸಾಗುತ್ತಿರುವ ಸ್ಪರ್ಧಾ ಜಗತ್ತಿನಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಮೌಲ್ಯಾಧಾರಿತ ಬದುಕನ್ನು ಕಂಡುಕೊಂಡರೆ ಭವಿಷ್ಯದ ಬದುಕು ಸುಂದರವಾಗಿರುತ್ತದೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಟಿ.ಎಸ್.ನಾಗರಾಜಶೆಟ್ಟಿ ತಿಳಿಸಿದರು.

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ, ಎನ್.ಎಸ್.ಎಸ್. ಸ್ಕೌಟ್ಸ್ ಮತ್ತು ಗೈಡ್ಸ್, ರೆಡ್‌ಕ್ರಾಸ್ ಮತ್ತು ಕ್ರೀಡಾ ಚಟುವಟಿಕೆಗಳನ್ನು ಉದ್ಘಾಟಿಸಿ, ಶಿಕ್ಷಣ ಪಡೆಯುವುದಲ್ಲ ಸಾಧಿಸುವಂತಹದ್ದು. ಸುಲಭವಾಗಿ ಎಲ್ಲರ ಸ್ವತ್ತಾಗುವುದಿಲ್ಲ. ತಪಸ್ಸಿನಿಂದ ಪಡೆಯಬೇಕು. ಹಣ ಕೊಟ್ಟರೆ ಎಲ್ಲವನ್ನೂ ಗೆಲ್ಲಬಹುದು ಎಂದು ಭಾವಿಸಿದ್ದೇವೆ. ಆದರೆ ಹಣದಿಂದ ಸುಂದರ ಬದುಕನ್ನು ಕೊಂಡಕೊಳ್ಳಲಾಗುವುದಿಲ್ಲ ಎಂದರು

ವಿದ್ಯಾರ್ಥಿಗಳು ಹಣಗಳಿಕೆಗಾಗಿ ಶಿಕ್ಷಣವಂತರಾಗದೆ ಸಮಾಜದ, ದೇಶದ ಉನ್ನತಿಗಾಗಿ ಶಿಕ್ಷಣವಂತರಾಗಬೇಕಿದೆ. ಕನ್ನಡ ಭಾಷೆ ಅತ್ಯಂತ ಸುಂದರ ಭಾಷೆಯಾಗಿದ್ದು, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿದೆ. ಸಂಸ್ಕೃತಿ, ಸಾಹಿತ್ಯವನ್ನು ಪ್ರತಿಬಿಂಬಿಸುವ ನಿಟ್ಟಿನಲ್ಲಿ ನಾಡಿನ ಸಾಹಿತಿಗಳೆಲ್ಲರೂ ಮುಂದಾಗಿ ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಕಥೆ, ಕಾದಂಬರಿ, ಸಾಹಿತ್ಯ ಓದುವ ಮೂಲಕ ಸಂಸ್ಕಾರವಂತರಾಗಿ ಸುಸಂಸ್ಕೃತ ಸಮಾಜವನ್ನು ನಿರ್ಮಿಸಬೇಕು ಎಂದರು.



ತಿಪಟೂರಿನ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವನ್ನು ಸಾಹಿತಿ ಟಿ.ಎಸ್. ನಾಗರಾಜಶೆಟ್ಟಿ ಉದ್ಘಾಟಿಸಿದರು. ಕೆವಿಎಸ್ ಅಧ್ಯಕ್ಷ ಪಿ.ಕೆ. ತಿಪ್ಪೇರುದ್ರಪ್ಪ ಮತ್ತಿತರರು ಭಾಗವಹಿಸಿದ್ದರು.

ಕೆವಿಎಸ್ ಅಧ್ಯಕ್ಷ ಪಿ.ಕೆ. ತಿಪ್ಪೇರುದ್ರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಠ್ಯ ಮತ್ತು ಪ್ರಯೋಗಾಲಯದ ತರಗತಿಗಳಲ್ಲಿ ಹೆಚ್ಚು ಆಸಕ್ತಿ, ಶ್ರದ್ಧೆಯಿಂದ ಕಲಿಯಬೇಕು. ಉತ್ತಮ ಜ್ಞಾನ, ಅಂಕಗಳನ್ನು ಪಡೆಯುವ ಮೂಲಕ ಸಂಸ್ಥೆಗೆ ಮತ್ತು ತಂದೆ, ತಾಯಿಗೆ ಕೀರ್ತಿ ತರಬೇಕೆಂದರು.

ಕೆವಿಎಸ್ ಕಾರ್ಯದರ್ಶಿ ರಾಜಕುಮಾರ್ ಮಾತನಾಡಿ, ಸಾಧನೆ ಮಾಡಿದ ವ್ಯಕ್ತಿ ಅಳಿದರೂ ಅವರ ಸಾಧನೆ ಅಳಿಯುವುದಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಸಾಧಿಸುವ ಛಲವನ್ನು ಮೈಗೂಡಿಸಿಕೊಂಡು ಸಾಧನೆಯ ಹಾದಿಯಲ್ಲಿ ಮುನ್ನಡೆಯಬೇಕೆಂದರು. ಪ್ರಾಂಶುಪಾಲ ವೈ.ಪಿ. ಶಿರೂರ್ ಸೇರಿದಂತೆ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರಿದ್ದರು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಂಯುಕ್ತ ಕರ್ನಾಟಕ. ತಾ. ೨೩.೮.೨೦೧೭ 23.8.2017

Samuktha Karnataka

TITLE OF THE ACTIVITY/EVENT : Inauguration Day

**DATE- 23-8-2017**

**NAME OF THE RESOURCE PERSON- Prof. Nagaraj Setty**

**DESIGNATION OF THE RESOURCE PERSON-** Retired professor of Kannada and recipient of the Sahitya Academy Award.

**Report:** Writer Nagaraj Setty said education should be value-based; then, life will be beautiful. To be educated in the truest sense is difficult. He said you must do penance for it. We feel money can buy everything but cannot buy beautiful life. Education should not just pave the way for making money but for society building and the nation's progress. Karnataka has won eight Jnana Peeta Awards. The contributions of poets, writers, dramatists, lyricists, and saints have kept alive the glorious past and its heritage in Karnataka.

Science and arts should go in hand in hand. By developing the hobby of reading literature, one can establish a cultured and civilized society.

President Sri Thipperudrappa requested the students to learn with great interest and diligence and enhance their knowledge and marks to bring name and fame to the institution and their parents.

Secretary Prof Rajkumar said that great people have died, but their achievements are immortal. Determination and dedication will help students in their careers. Principal Y.P. Shirur, faculty, non-teaching staff and students were present.

ಉಲ್ಲೇಖ: 1 ಸರ್ಕಾರದ

2. ನಿರ್ದೇಶಕ

3. ಮಾನ್ಯಕುಲ

ಮೇಲ್ಕಂಡ ವಿಷಯಕ್ಕೆ

ಸ್ವಾಮ್ಯಕ್ಕೊಳಪಡುವ ಸಂಸ್ಥೆಗಳು

ನೆನಪಿನ ಕಾಣಿಕೆ ಇತ್ಯಾದಿ ಯಾವ

ತಿಳಿಸಿದ್ದು, ಈ ನಿರ್ದೇಶನವನ್ನು

ಈ ಹಿನ್ನೆಲೆಯಲ್ಲಿ ರಾ

ಅನುಷ್ಠಾನಗೊಳಿಸಲು ತುಮಕೂ

ರಿಯಾಯಿತಿ ದರದಲ್ಲಿ ಖರೀದಿ

ಸರ್ಕಾರದ ಆದೇಶವನ್ನು ಪಾಲಿಸು

ಕರಡು ಪ್ರತಿ ಮಾನ್ಯ ಕುಲಸಚಿವರಿಂದ

ಅಡಕ: ಪ್ರಸಾರಾಂಗ ಪುಸ್ತಕಗಳ

ಇವರಿಗೆ,

1. ಪ್ರಾಂಶುಪಾಲರು, ಎಲ್ಲಾ

2. ಅಧ್ಯಕ್ಷರು/ಸಂಯೋಜಕರ

ಪ್ರತಿಗಳು,

1. ಕುಲಸಚಿವರು (ಪರೀಕ್ಷಾಂ

2. ಹಣಕಾಸು ಅಧಿಕಾರಿಗಳು,

3. ನಿರ್ದೇಶಕರು, ಪ್ರಸಾರಾಂ

Scanned with OKEN Scanner

ಕಲ್ಪತರು ವಿದ್ಯಾ ಸಂಸ್ಥೆ (ರಿ.) ತಿಪಟೂರು.

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು

(ನ್ಯಾಕ್‌ನಿಂದ "A" ಶ್ರೇಣಿ ಪುರಸ್ಕೃತ - (CGPA - 3.07 ಅಂಕಗಳು)

**ತಿಪಟೂರು.**

2017-18 ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ., ಎನ್.ಎಸ್.ಎಸ್., ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಇಕೋ ಕ್ಲಬ್, ಯುವ ರೆಡ್ ಕ್ರಾಸ್, ರೆಡ್ ರಿಬ್ಬನ್ ಕ್ಲಬ್, ಫಿಲ್ಮ್ ಕ್ಲಬ್ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ

## ಪ್ರತಿಭಾಶ್ರೀ - 2018

**ದಿನಾಂಕ 05-04-2018, ಗುರುವಾರ**

**ಸಮಯ :** ಬೆಳಿಗ್ಗೆ 11-00 ಗಂಟೆಗೆ.    **ಸ್ಥಳ :** ಕಾಲೇಜಿನ ಸೆಮಿನಾರ್ ಹಾಲ್

ಅಧ್ಯಕ್ಷತೆ : **ಶ್ರೀ ಪಿ.ಕೆ. ತಿಪ್ಪೇರುದ್ರಪ್ಪನವರು**
ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.

ಮುಖ್ಯ ಅತಿಥಿಗಳು : **ಪ್ರೊ. ಬಿ.ಎಸ್. ಗುಂಜಾಲ್‌ರವರು**
ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ.

**ಶ್ರೀ ಎಸ್. ಶಿವರಾಮ್‌ರವರು**
ಹಿರಿಯ ಚಲನಚಿತ್ರ ಕಲಾವಿದರು, ಬೆಂಗಳೂರು.

**ಪ್ರೊ. ಎಂ. ವಿಕ್ರಮ್‌ರವರು**
ಪ್ರಾಂಶುಪಾಲರು, ರೂರಲ್ ಕಾಲೇಜು, ಕನಕಪುರ.

### ವಿಶೇಷ ಆಹ್ವಾನಿತರು :

ಉಪಾಧ್ಯಕ್ಷರುಗಳು, ಕ.ವಿ.ಸಂಸ್ಥೆ :
**ಶ್ರೀ ಎಚ್.ಎಚ್. ನಟರಾಜ್**
**ಶ್ರೀ ಜಿ.ಕೆ. ಪ್ರಭು**
**ಶ್ರೀ ಎ.ಎಂ. ಚಂದ್ರಶೇಖರಯ್ಯ**

ಕಾರ್ಯದರ್ಶಿಗಳು, ಕ.ವಿ.ಸಂಸ್ಥೆ :
**ಪ್ರೊ. ರಾಜಕುಮಾರ್**
**ಶ್ರೀ ಬಿ.ಆರ್. ವಿಶ್ವನಾಥ್**
**ಶ್ರೀ ಕೆ.ಪಿ.ರುದ್ರಮುನಿಸ್ವಾಮಿ**
**ಶ್ರೀ ಟಿ.ಯು.ಜಗದೀಶ್‌ಮೂರ್ತಿ**

**ಶ್ರೀ ಟಿ.ಎಚ್. ಶಿವಪ್ರಸಾದ್**
ಖಜಾಂಚಿಗಳು, ಕ.ವಿ.ಸಂಸ್ಥೆ.

## ಸರ್ವರಿಗೂ ಹಾರ್ದಿಕ ಸ್ವಾಗತ

**ಡಾ. ಎಸ್.ಬಿ. ಬಸವರಡ್ಡಿ,** ಎಂ.ಎಸ್ಸಿ.,ಎಂ.ಫಿಲ್.,ಪಿಹೆಚ್.ಡಿ.,
ಪ್ರಾಂಶುಪಾಲರು
ಬೋಧಕರು, ಬೋಧಕೇತರರು ಮತ್ತು ವಿದ್ಯಾರ್ಥಿ ವೃಂದ
ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

Scanned with OKEN Scanner


Date: 07.04.2018
Prathibashree [college day] Vijaya Karnataka (Daily)

# ವಿದ್ಯೆ ನಿಮ್ಮ ಜೀವನವನ್ನು ರೂಪಿಸುವಂತಿರಲಿ

■ ವಿಕ ಸುದ್ದಿಲೋಕ ತಿಪಟೂರು

ನೀವು ಗಳಿಸಿದ ವಿದ್ಯೆ ನಿಮ್ಮ ಜೀವನವನ್ನು ರೂಪಿಸುವಂತಿರಬೇಕೇ ವಿನಃ ನಿಮ್ಮ ಜೀವನವನ್ನು ಹಾಳು ಮಾಡುವಂತಿರಬಾರದು ಎಂದು ಕನ್ನಡ ಚಿತ್ರರಂಗದ ಹಿರಿಯ ಕಲಾವಿದ ಎಸ್.ಶಿವರಾಮ್ ತಿಳಿಸಿದರು.

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಯುವರೆಡ್‌ಕ್ರಾಸ್, ಫಿಲ್ಮ್‌ಕ್ಲಬ್ ಮತ್ತು ಕ್ರೀಡಾ ಚಟುವಟಿಕೆಗಳ ಪ್ರತಿಭಾಶ್ರೀ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ನಿಮ್ಮ ವಿದ್ಯೆಗೆ ತಕ್ಕಂತೆ ಸಂಪಾದನೆ ಇದ್ದರೆ ಜೀವನದ ಹಾದಿ ಸುಗಮವಾಗುತ್ತದೆ. ಕಲೆಗೆ ದೊಡ್ಡ ಶಕ್ತಿ ಇದ್ದು, ಚಿಕ್ಕ ವಯಸ್ಸಿನಲ್ಲಿಯೇ ಬಣ್ಣ ಹಚ್ಚಿದ ನಾನು 300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದ್ದೇನೆ. ಆದರೆ ನಾನು ನಟಿಸಿದ ಯಾವ ಚಿತ್ರಗಳಲ್ಲಿಯೂ ಅಶ್ಲೀಲ ಪದಗಳ ಬಳಕೆ ಮಾಡಿಲ್ಲ, ದ್ವಂದ್ವಾರ್ಥ ಇಲ್ಲ, ಕುಟುಂಬಸಮೇತ ಕೂತು ತಲೆಎತ್ತಿ ನೋಡುವಂತಹ ಚಿತ್ರಗಳನ್ನೇ ಮಾಡಿದ್ದೇನೆ. ನನ್ನ ಅಭಿನಯಕ್ಕೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ದೊರೆತಿವೆ. ಈ ಯಾವ ಪ್ರಶಸ್ತಿಗಳ ಹಿಂದೆ ನಾನು ಬೆನ್ನತ್ತಿ ಹೋದವನಲ್ಲ, ಅವುಗಳೇ ನನ್ನನ್ನು ಹುಡುಕಿಕೊಂಡು ಬಂದಿವೆ. ಆದ್ದರಿಂದ ಕಲೆಯನ್ನು ಪ್ರತಿಯೊಬ್ಬರು ಪ್ರೋತ್ಸಾಹಿಸುವ ಮೂಲಕ ಆರಾಧಿಸಬೇಕು. ಹಿಂದಿನ ಸಿನಿಮಾಗಳಿಗೂ ಇಂದಿನ ಸಿನಿಮಾಗಳಿಗೂ ಸಾಕಷ್ಟು ವ್ಯತ್ಯಾಸಗಳಿದ್ದು, ಹಳೆ ಸಿನಿಮಾಗಳಲ್ಲಿದ್ದ ಸಾಹಿತ್ಯ, ಅಭಿನಯಗಳನ್ನು ಜನರು ಈಗಲೂ ಮರೆತಿಲ್ಲ. ಜನರ ಮನಸ್ಸಿನಲ್ಲಿ ಉಳಿಯುವಂತ ಚಿತ್ರಗಳು ಇಂದು ನಿರ್ಮಾಣವಾಗುತ್ತಿಲ್ಲ, ಅಲ್ಲದೆ ಜನರು ಮೆಲುಕು ಹಾಕುವಂತಹ ಚಿತ್ರಗಳು ಇಂದಿಗೂ ನಿರ್ಮಾಣವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ತಿಪಟೂರಿನಲ್ಲಿ ನಡೆದ ಪ್ರತಿಭಾಶ್ರೀ ಸಮಾರೋಪ ಸಮಾರಂಭವನ್ನು ಹಿರಿಯ ಚಲನಚಿತ್ರ ಕಲಾವಿದ ಎಸ್. ಶಿವರಾಮ್ ಉದ್ಘಾಟಿಸಿದರು. ತುಮಕೂರು ವಿವಿಯ ಕುಲಸಚಿವ ಪ್ರೊ.ಬಿ.ಎಸ್.ಗುಂಜಾಲ್, ಬೆಂಗಳೂರು ದೈಹಿಕ ಶಿಕ್ಷಣ ನಿರ್ದೇಶಕ ಎಂ.ಆರ್.ಶಶಿಧರ್, ಪ್ರಿನ್ಸಿಪಾಲ್ ಡಾ.ಎಸ್.ಬಿ. ಬಸವರಡ್ಡಿ ಮತ್ತಿತರರು ಇದ್ದರು.

ತುಮಕೂರು ವಿವಿಯ ಕುಲಸಚಿವ ಪ್ರೊ.ಬಿ.ಎಸ್. ಗುಂಜಾಲ್ ಮಾತನಾಡಿ, ಪದವಿ ಪರೀಕ್ಷೆಗಳಿಗೆ ಕ್ಷಣಗಣನೆ ಆರಂಭವಾಗಿದ್ದು, ವಿದ್ಯಾರ್ಥಿಗಳು ಸಮಯವನ್ನು ವ್ಯರ್ಥ ಮಾಡದೆ ಓದಿನತ್ತ ಆಸಕ್ತಿ ವಹಿಸಬೇಕು. ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಸಂಸ್ಥೆ ಹಾಗೂ ಪೋಷಕರಿಗೆ ಕೀರ್ತಿ ತರಬೇಕು ಎಂದರು.

ಬೆಂಗಳೂರು ದೈಹಿಕ ಶಿಕ್ಷಣ ನಿರ್ದೇಶಕ ಎಂ.ಆರ್. ಶಶಿಧರ್ ಮಾತನಾಡಿ, ವಿದ್ಯಾರ್ಥಿಗಳಿಗೆ ಇಂದು ಸ್ಪರ್ಧಾತ್ಮಕ ಯುಗವಾಗಿದೆ. ಹತ್ತಾರು ವಿಚಾರಗಳನ್ನು ಅರಿತು ತಮ್ಮಲಿರುವ ಪ್ರತಿಭೆಯನ್ನು ಪ್ರದರ್ಶಿಸುವ ಗುಣ ಬೆಳೆಸಿಕೊಳ್ಳಬೇಕು. ಕೇವಲ ಎಲೆಮರೆ ಕಾಯಿಯಂತಾಗದೆ ಪ್ರತಿಭೆಯ ಅನಾವರಣಕ್ಕೆ ಮುಂದಾಗಬೇಕು ಎಂದರು.

ಕೆವಿಎಸ್ ಕಾರ್ಯದರ್ಶಿ ಕೆ.ಪಿ.ರುದ್ರಮುನಿ, ಪ್ರಿನ್ಸಿಪಾಲ್ ಡಾ.ಎಸ್.ಬಿ.ಬಸವರಡ್ಡಿ, ದೈಹಿಕ ಶಿಕ್ಷಣ ನಿರ್ದೇಶಕ ಗೋವಿಂದರಾಜು, ಕಿರುತೆರೆ ನಟ ದಯಾನಂದಸಾಗರ್, ಪ್ರಿನ್ಸಿಪಾಲ್ ಡಾ.ಎಚ್.ಸಿ.ಜಗದೀಶ್, ಕೆವಿಎಸ್ ಉಪಾಧ್ಯಕ್ಷ ಪ್ರೊ. ರಾಜಕುಮಾರ್, ಖಜಾಂಚಿ ಟಿ.ಎಸ್.ಶಿವಪ್ರಸಾದ್, ಕೆಐಟಿ ಪ್ರಿನ್ಸಿಪಾಲ್ ಡಾ.ನಂದೀಶಯ್ಯ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಜರಿದ್ದರು.

, Chamarajpet, Bengaluru - 560 018 (Ph:080 - 40877666, Fax: 080 - 40877695/696) and printed by him at Bennett Coleman & Co. Ltd., No. 9/10/11-A, 4th Main, Bommasandra
galuru – 560004 (Ph:080-40695000). Editor: Thimmappa Bhat. © All Rights Reserved. Reproduction in whole or part without permission is prohibited.
RNI No. 71653/99
Vol. 19 Issue no. 182

**ACTIVITY/EVENT : Inauguration Day.**

DATE: 7-4-2018

**DESIGNATION OF THE RESOURCE PERSONS: Shivaram -Cini artist,** Prof. B.N. Gunjal, Registrar of Tumkur University, and Physical Education Director, M.R. Shashidhar

**REPORT:**

Cini artist said he has acted in more than 300 movies. He has never used obscene words or dual-meaning words in his films, and the whole family can watch his movies sitting together. He said he had received many national awards, but he was not after the name or fame, and he believed if you are true to your profession, the awards will come to you. He also said you could worship the art by encouraging both performing and fine art. Even today, people have not forgotten the lyrics, literature and acting in old movies. There is a lot of difference between old and new movies. He expressed his distress and pain that movies produced nowadays don't remain in your heart or mind. He said if you earn according to your education, life becomes easy. Education can evolve and groom your life.

Prof. Gunjal urged the students to study well, score good marks, and [bring] give ~~their parents~~ glory. [to their parents]

Physical Education Director M.R. Shashidhar motivated the students and said in the present competitive World, to niche a name is highly challenging and needs a lot of dedication, determination and commitment.

Treasurer Sri Shivaprasad, Secretary Sri Rajkumar, Secretary Sri K.P. Rudra Muni, Principal Basava Raddi, Principal N. Jagadeesh, faculty and students were present.

Scanned with OKEN Scanner

ಕಲ್ಪತರು ವಿದ್ಯಾ ಸಂಸ್ಥೆ (ರಿ.) ತಿಪಟೂರು.

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು

(ನ್ಯಾಕ್‌ನಿಂದ **"A"** ಶ್ರೇಣಿ ಪುರಸ್ಕೃತ - (CGPA - 3.07 ಅಂಕಗಳು)

ಯು.ಜಿ.ಸಿ. ಯಿಂದ 2(f) 12(b) ಮಾನ್ಯತೆ ಪಡೆದಿದೆ.

**ತಿಪಟೂರು.**

2019-20 ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ., ಎನ್.ಎಸ್.ಎಸ್., ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್, ಇಕೋ ಕ್ಲಬ್, ರೆಡ್ ರಿಬ್ಬನ್ ಕ್ಲಬ್, ಫಿಲ್ಮ್ ಕ್ಲಬ್, ಯುವ ರೆಡ್ ಕ್ರಾಸ್ ಮತ್ತು ಕ್ರೀಡಾ ಚಟುವಟಿಕೆಗಳ

## ಉದ್ಘಾಟನಾ ಸಮಾರಂಭ

**ದಿನಾಂಕ 01-08-2019 ನೇ ಗುರುವಾರ**

**ಸಮಯ :** ಬೆಳಗ್ಗೆ 11-00 ಗಂಟೆಗೆ    **ಸ್ಥಳ :** ಕಾಲೇಜಿನ ಸೆಮಿನಾರ್ ಹಾಲ್

**ಅಧ್ಯಕ್ಷತೆ :** ಶ್ರೀ ಪಿ.ಕೆ. ತಿಪ್ಪೇರುದ್ರಪ್ಪ
ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.

**ಮುಖ್ಯ ಅತಿಥಿಗಳು :** ಡಾ. ಕೆ.ಎಂ. ಸುರೇಶ್, ಎಂ.ಎಸ್ಸಿ.,ಎಂ.ಎಡ್.,ಪಿಹೆಚ್.ಡಿ.,
ಸಿಂಡಿಕೇಟ್ ಸದಸ್ಯರು, ತುಮಕೂರು ವಿಶ್ವವಿದ್ಯಾನಿಲಯ,
ಪ್ರಧಾನ ಸಂಪಾದಕರು, ಸ್ಪರ್ಧಾ ವಿಜೇತ ಮಾಸಪತ್ರಿಕೆ,
ನಿರ್ದೇಶಕರು, ಸ್ಪರ್ಧಾ ವಿಜೇತ ಸ್ಪರ್ಧಾತ್ಮಕ ತರಬೇತಿ ಕೇಂದ್ರ,
ವಿಜಯನಗರ, ಬೆಂಗಳೂರು.

**ವಿಶೇಷ ಆಹ್ವಾನಿತರು :**

ಉಪಾಧ್ಯಕ್ಷರುಗಳು, ಕ.ವಿ.ಸಂಸ್ಥೆ :
ಶ್ರೀ ಎಚ್.ಎಚ್. ನಟರಾಜ್
ಶ್ರೀ ಜಿ.ಕೆ. ಪ್ರಭು
ಶ್ರೀ ಎ.ಎಂ. ಚಂದ್ರಶೇಖರಯ್ಯ

ಕಾರ್ಯದರ್ಶಿಗಳು, ಕ.ವಿ.ಸಂಸ್ಥೆ :
ಪ್ರೊ. ರಾಜಕುಮಾರ್
ಶ್ರೀ ಬಿ.ಆರ್. ವಿಶ್ವನಾಥ್
ಶ್ರೀ ಕೆ.ಪಿ.ರುದ್ರಮುನಿಸ್ವಾಮಿ
ಶ್ರೀ ಟಿ.ಯು.ಜಗದೀಶ್‌ಮೂರ್ತಿ

ಶ್ರೀ ಟಿ.ಎಸ್. ಶಿವಪ್ರಸಾದ್
ಖಜಾಂಚಿಗಳು, ಕ.ವಿ.ಸಂಸ್ಥೆ.

**ಸರ್ವರಿಗೂ ಹಾರ್ದಿಕ ಸ್ವಾಗತ**

ಡಾ. ಎ.ಎಂ.ಶಿವಣ್ಣ, ಎಂ.ಎಸ್ಸಿ.,ಎಂ.ಫಿಲ್.,ಪಿಹೆಚ್.ಡಿ.,
ಪ್ರಾಂಶುಪಾಲರು,
ಅಧ್ಯಾಪಕರು, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿ ವೃಂದ
ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

Scanned with OKEN Scanner

Prajavani [Daily]


Date: 02.08.2019

Inauguration day

# ಸ್ಪರ್ಧಾ ಮನೋಭಾವ ಬೆಳೆಸಿಕೊಳ್ಳಿ

## ತಿಪಟೂರು: ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ಕೆ.ಎಂ.ಸುರೇಶ್

ಪ್ರಜಾವಾಣಿ ವಾರ್ತೆ



ಕೆ.ಎಂ.ಸುರೇಶ್, ಕಲ್ಪತರು ವಿದ್ಯಾಸಂಸ್ಥೆಯ ಅಧ್ಯಕ್ಷ ಪಿ.ಕೆ.ತಿಪ್ಪೇರುದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿದರು.

**ತಿಪಟೂರು:** ಈಗ ಸ್ಪರ್ಧಾತ್ಮಕ ಯುಗ ಶುರುವಾಗಿದೆ. ವಿದ್ಯಾರ್ಥಿಗಳು ಅಮೂಲ್ಯ ಸಮಯವನ್ನು ವ್ಯರ್ಥ ಮಾಡದೆ ಕಲಿಕೆಯ ಜತೆಗೆ ಜಾಗತಿಕ ವಿದ್ಯಮಾನಗಳ ಅರಿವು ಮತ್ತು ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಪತ್ರಕರ್ತ ಕೆ.ಎಂ.ಸುರೇಶ್ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಲ್ಪತರು ಪ್ರಥಮದರ್ಜೆ ವಿಜ್ಞಾನ ಕಾಲೇಜಿನಲ್ಲಿ 2019-20ನೇ ಸಾಲಿನ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ., ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಇಕೋ ಕ್ಲಬ್, ರೆಡ್ ರಿಬ್ಬನ್ ಕ್ಲಬ್, ಫಿಲ್ಮ್ ಕ್ಲಬ್, ಯುವ ರೆಡ್ ಕ್ರಾಸ್ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿ ದಿಸೆಯಿಂದಲೇ ಉನ್ನತವಾದ ಗುರಿಯ ಬಗ್ಗೆ ಕನಸನ್ನು ಹೊಂದಬೇಕು. ಪ್ರತಿಕ್ಷಣವೂ ಅದನ್ನು ಸಾಧಿಸುವ ಮನಸ್ಥಿತಿ ಹೊಂದಬೇಕು. ಸಮಾಜದಲ್ಲಿ ಜ್ಞಾನ ಹೊಂದಿರುವವರಿಗೆ ಮಾತ್ರ ಬೆಲೆಯಿದೆ. ಜ್ಞಾನ ಹೆಚ್ಚಳಕ್ಕೆ ಹೆಚ್ಚಿನ ಆಸಕ್ತಿ ವಹಿಸಬೇಕು. ವ್ಯಕ್ತಿತ್ವ ನಿರ್ಮಾಣ ಮಾಡಬೇಕಾದ ಕಾಲೇಜು ಶಿಕ್ಷಣ ಕೇವಲ ಜೀವನ ನಿರ್ವಹಣೆಯ ದಾರಿ ಕಂಡುಕೊಳ್ಳಲು ಅಧ್ಯಯನವಾಗಿದೆ ಎಂದರು.

ತಂತ್ರಜ್ಞಾನ ಮುಂದುವರೆದಿದ್ದು ಕುಳಿತಲ್ಲಿಯೇ ಜ್ಞಾನ ವೃದ್ಧಿ ಮಾಡಿಕೊಳ್ಳಬಹುದು. ಜ್ಞಾನ, ವ್ಯಕ್ತಿತ್ವ, ಬುದ್ಧಿ, ವಿವೇಕದ ಜತೆಗೆ ಕರುಣೆಯನ್ನು ಅಳವಡಿಸಿಕೊಂಡರೆ ಯಾವ ಸಂದರ್ಭದಲ್ಲಿ ಯಾವ ಕಾರ್ಯ ಮಾಡಬೇಕು ಎನ್ನುವ ನಿರ್ಧಾರ ಕೈಗೊಳ್ಳಲು ಸಹಕಾರಿಯಾಗಲಿದೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಪಠ್ಯದ ಚಟುವಟಿಕೆಗಳ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು. ಉತ್ತಮ ಜೀವನ ನಿರ್ಮಾಣ ಮಾಡಿಕೊಂಡು ಸದೃಢ ದೇಶದ ನಿರ್ಮಾಣದಲ್ಲಿ ಭಾಗಿಗಳಾಗಬೇಕು ಎಂದು ಯುವಜನತೆಗೆ ಕರೆ ನೀಡಿದರು.

ಪ್ರಾಂಶುಪಾಲ ಎ.ಎಂ.ಶಿವಣ್ಣ, 57 ವರ್ಷಗಳಿಂದ ಕಾಲೇಜು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಿಸುತ್ತಾ ಬಂದಿದೆ. ಶಿಕ್ಷಣದ ಜತೆಗೆ ಸೇವಾ ಮನೋಭಾವ, ದೇಶಭಕ್ತಿ, ಸಂಸ್ಕಾರ, ಸಂಸ್ಕೃತಿ ಪರಿಚಯಿಸಿ ಉತ್ತಮ ಸಮಾಜದ ನಿರ್ಮಾಣ ಮಾಡಲಾಗುತ್ತಿದೆ. ಜ್ಞಾನ ಎಂಬುದು ಸಂಪತ್ತಾಗಿದೆ. ಕಠಿಣ ಪರಿಶ್ರಮದಿಂದ ಮಾತ್ರವೇ ಅದು ಒಲಿಯುತ್ತದೆ. ಅಲ್ಲದೇ ಯಾರಿಂದಲೂ ಕಸಿದುಕೊಳ್ಳಲಾಗದಂತಹ ಸಂಪತ್ತಾಗಿದೆ. ಪ್ರತಿಯೊಬ್ಬರೂ ಕಾಲೇಜಿನಲ್ಲಿ ಇರುವಂತಹ ಎಲ್ಲ ಸೌಕರ್ಯಗಳ ಸದುಪಯೋಗ ಪಡೆದು ಕೊಂಡು ಉತ್ತಮ ಜ್ಞಾನವೃದ್ಧಿ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಲ್ಪತರು ವಿದ್ಯಾಸಂಸ್ಥೆಯ ಕಾರ್ಯದರ್ಶಿ ರಾಜಕುಮಾರ್, ವಿದ್ಯಾರ್ಥಿ ದೆಸೆಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಂಡರೆ ಮಾತ್ರವೇ ಮುಂದಿನ ಜೀವನ ಸುಖಮಯ ಆಗಿರುತ್ತದೆ. ವಿದ್ಯಾರ್ಥಿಗಳು ಜೀವನದಲ್ಲಿ ಬರುವಂತಹ ಎಲ್ಲ ಸಮಸ್ಯೆಗಳನ್ನು ಎದುರಿಸುವಂತಹ ಛಲ, ಮನೋಭಾವ, ಆತ್ಮಸ್ಥೈರ್ಯ ಬೆಳೆಸಿಕೊಳ್ಳುವ ಅಗತ್ಯವಿದೆ ಎಂದರು.

ಕಲ್ಪತರು ವಿದ್ಯಾಸಂಸ್ಥೆಯ ಅಧ್ಯಕ್ಷ ಪಿ.ಕೆ.ತಿಪ್ಪೇರುದ್ರಪ್ಪ, ಸಂಸ್ಥೆಯ ಕಾರ್ಯದರ್ಶಿಗಳಾದ ಕೆ.ಪಿ.ರುದ್ರಮುನಿ ಸ್ವಾಮಿ, ಟಿ.ಯು.ಜಗದೀಶಮೂರ್ತಿ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಗೀತಾಲಕ್ಷ್ಮೀ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

**ಮುಖ್ಯಾಂಶಗಳು**

- ಉನ್ನತ ಗುರಿಯ ಕನಸನ್ನು ಹೊಂದಿ
- ಬುದ್ಧಿ, ವಿವೇಕದ ಜತೆ ಕರುಣೆ ಅಳವಡಿಸಿಕೊಳ್ಳಿ
- ಎಲ್ಲ ಸಮಸ್ಯೆಗಳನ್ನು ಎದುರಿಸುವಂತಹ ಛಲ, ಮನೋಭಾವ, ಆತ್ಮಸ್ಥೈರ್ಯ ಬೆಳೆಸಿಕೊಳ್ಳಿ

Scanned with OKEN Scanner

# ಭಾಷೆ, ಜಾತಿ: ವಾಸ್ತವದ ಅರಿವು ಅಗತ್ಯ

## ತತ್ವಪದಗಳ ಗಂಭೀರ ಅಧ್ಯಯನಕ್ಕೆ ಲೇಖಕ ನಟರಾಜ ಬೂದಾಳು ಸಲಹೆ

ಪ್ರಜಾವಾಣಿ ವಾರ್ತೆ 26/11/21

ತಿಪಟೂರು: 'ಭಾಷೆ ಹಾಗೂ ಜಾತಿ ವಿಚಾರವಾಗಿ ಸಮಾಜದಲ್ಲಿನ ಕಾಲ್ಪನಿಕ ಸಂರಚನೆ ಬಗ್ಗೆ ವಿದ್ಯಾರ್ಥಿಗಳು ವಾಸ್ತವತೆ ಅರಿತು, ನಡೆಯುವ ಅಗತ್ಯವಿದೆ' ಎಂದು ಲೇಖಕ ನಟರಾಜ ಬೂದಾಳು ಹೇಳಿದರು.

ನಗರದ ಕಲ್ಪತರು ಸಭಾಂಗಣದಲ್ಲಿ ಗುರುವಾರ ಕಲ್ಪತರು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ 2021-22ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ಎನ್‌ಸಿಸಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಯುವ ರೆಡ್‌ಕ್ರಾಸ್ ಚಟುವಟಿಕೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಪದವಿ ಪೂರ್ವದಿಂದ ಪದವಿಗೆ ಕಾಲಿಡುವ ವಿದ್ಯಾರ್ಥಿಗಳು ವಾಸ್ತವ ಜಗತ್ತಿಗೆ ಮೊದಲ ಬಾರಿಗೆ ಕಾಲಿಡುವ ಸನ್ನಿವೇಶ. ಹದಿಹರಿಯಕ್ಕೆ ಬಂದಾಗ ಕನಸಿನಿಂದ ವಾಸ್ತವಕ್ಕೆ ಬರುವ ಕಾಲ. ಮಕ್ಕಳಲ್ಲಿನ ಬದಲಾವಣೆಯೂ ಹದಿಹರಿಯಕ್ಕೆ ಕಾಲಿಟ್ಟಾಗ ಒಬ್ಬೊಬ್ಬರ ವ್ಯಕ್ತಿತ್ವ ಒಂದೊಂದು ರೀತಿಯಲ್ಲಿ ಬದಲಾಗುತ್ತದೆ. ಅಂದರೆ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಬದಲಾಗುತ್ತದೆ. ಈ ಬದಲಾವಣೆಗಳ ಜೊತೆಗೆ ತಾರತಮ್ಯದ ಮನೋಭಾವವೂ ರೂಪುಗೊಳ್ಳುತ್ತದೆ ಎಂದರು.

ಕನ್ನಡ ನಾಡಿನ ನೆಲ ಸಾಮಾನ್ಯವಾದುದಲ್ಲ. ತತ್ವಪದಗಳ ತವರೂರು. ಪ್ರತಿಯೊಬ್ಬರೂ ತತ್ವಪದಗಳ ಬಗ್ಗೆ ಅರಿಯಬೇಕು ಎಂದು ಹೇಳಿದರು.

ಕಲ್ಪತರು ವಿದ್ಯಾಸಂಸ್ಥೆ ಕಾರ್ಯದರ್ಶಿ ಎಚ್.ಜಿ.ಸುಧಾಕರ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಆಲಿಸುವ ಮನಸ್ಥಿತಿ ಬೆಳೆಸಿಕೊಂಡಾಗ ಮಾತ್ರ ಯಶಸ್ಸಿನ ಹಾದಿಯಲ್ಲಿ ನಡೆಯಲು ಸಾಧ್ಯ ಎನ್ನುವುದನ್ನು ಅರಿಯಬೇಕು. ಅನಗತ್ಯ ಮೊಬೈಲ್ ಬಳಕೆಗೆ ಕಡಿವಾಣ ಹಾಕಬೇಕು ಎಂದರು.

ವಿದ್ಯಾಸಂಸ್ಥೆ ಉಪಾಧ್ಯಕ್ಷ ಜಿ.ಪಿ.ದೀಪಕ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳುವಲ್ಲಿ ಸರ್ಕಾರ ಹಾಗೂ ಸಂಸ್ಥೆಯ ಸಕಲ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ವಿದ್ಯಾಸಂಸ್ಥೆ ಕಾರ್ಯದರ್ಶಿ ಎಂ.ಆರ್.ಸಂಗಮೇಶ್, ಪ್ರಾಂಶುಪಾಲ ಚಿತ್ತರಂಜನ್ ರೈ, ಪ್ರಾಂಶುಪಾಲೆ ಡಾ.ವಿ.ಮಾಲತಿ, ಗೀತಾಲಕ್ಷ್ಮೀ, ಉಪನ್ಯಾಸಕರಾದ ವೀರಣ್ಣ, ಪ್ರೊ. ಶೈಲಜಾ, ಸೋಮಶೇಖರ್, ಪ್ರೊ. ಪ್ರಕಾಶ್ ಇದ್ದರು.



ತಿಪಟೂರಿನ ಕಲ್ಪತರು ವಿಜ್ಞಾನ ಪ್ರಥಮದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳನ್ನು ಉದ್ಘಾಟಿಸಿದ ಲೇಖಕ ನಟರಾಜ ಬೂದಾಳು. ಉಪನ್ಯಾಸಕಿ ಶೈಲಜಾ, ಪ್ರಾಂಶುಪಾಲೆ ಗೀತಾಲಕ್ಷ್ಮೀ, ಪ್ರಾಂಶುಪಾಲ ಚಿತ್ತರಂಜನ್ ರೈ ಇದ್ದರು.

Prajavani [Daily]

**TITLE OF THE ACTIVITY/EVENT:** Inauguration Day

**Date: 26-11-21**

**Resource Person: Natraj Bhodal, writer and thinker.**

**Report:** Natraj said students should not get carried away by caste and language politics but pay attention to the realities than imaginative narratives. Adolescent age is susceptible, and individual personality changes according to their capabilities. With these changes, attitudes towards discrimination change. Kannada land is not ordinary; it is full of folklore. Everybody should gain knowledge of folk literature because it paves the way for a better understanding of life.

Secretary, Sri Sudhakar said one should cultivate the habit of listening and concentrating, then success follows. Students should not become slaves of Mobile.


Vice President Sri Deepak said that the Institution and the Government support the students in all their endeavours, and he said to use it and shape their careers.

Secretary Sri Sangamesh, Principal Dr. Chittaranjan Rai, Dr. Malathi, Geeta Lakshmi and faculty were present.

Scanned with OKEN Scanner

# ಕೆಟ್ಟ ಹವ್ಯಾಸ ಬಿಟ್ಟು ಮುಕ್ತ ವ್ಯಸನ ಭಾರತ ಕಟ್ಟುವ ಸಂಕಲ್ಪ ಮಾಡಿ

## ರಾಜ್ಯ ಸಂಪನ್ಮೂಲ ವ್ಯಕ್ತಿ ಬಾಲಕೃಷ್ಣರಾಜ್ ನೀರ್ಚಾಲ್ ಸಲಹೆ



ತಿಪಟೂರು: ದೇಶದಲ್ಲಿ ಶೇ.80ರಷ್ಟು ಯುವಪೀಳಿಗೆ ಮಾದಕವ್ಯಸನಕ್ಕೆ ಬಲಿಯಾಗುತ್ತಿದ್ದು, ಇಂತಹ ಕೆಟ್ಟ ಹವ್ಯಾಸಗಳನ್ನು ಬಿಟ್ಟು ಮಾದಕ ಮುಕ್ತ ಭಾರತ ಕಟ್ಟುವ ಸಂಕಲ್ಪ ಯುವಜನತೆ ಮಾಡಲೇಬೇಕೆಂದು ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಷ್ಟ್ರೀಯ ರಕ್ಷಣಾ ಸಂಸ್ಥೆಯ ರಾಜ್ಯ ಸಂಪನ್ಮೂಲ ವ್ಯಕ್ತಿ ಬಾಲಕೃಷ್ಣರಾಜ್ ನೀರ್ಚಾಲ್ ತಿಳಿಸಿದರು. 18-1-22

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ನಡೆದ ಮಾದಕ ವಸ್ತುಗಳ ನಿಯಂತ್ರಣ ಉಪನ್ಯಾಸ ಮಾಲಿಕೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, 140 ಕೋಟಿ ಜನಸಂಖ್ಯೆ ಹೊಂದಿರುವ ನಮ್ಮ ದೇಶದಲ್ಲಿ ಶೇ.80ರಷ್ಟು ಜನರು ಒಂದಲ್ಲಾ ಒಂದು ರೀತಿಯ ಮಾದಕ ವ್ಯಸನಗಳಿಗೆ ಬಲಿಯಾಗುತ್ತಿದ್ದಾರೆ. ಅದರಲ್ಲಿ ಯುವ ಜನತೆ ಹೆಚ್ಚಾಗಿ ಮಾದಕ ವ್ಯಸನಗಳಾಗಿರುವುದು ದುರದೃಷ್ಟಕರ ಸಂಗತಿ ಎಂದು ವಿಷಾದಿಸಿದರು.

ಬೀಡಿ, ನಶ್ಯ, ಸಿಗರೇಟ್, ಗಾಂಜಾ, ಅಫೀಮು, ಕೊಕೈನ್, ಬ್ರೌನ್ ಷುಗರ್, ತಂಬಾಕು, ಭಂಗಿ ಇತ್ಯಾದಿ ಮಾದಕವ್ಯಸನಗಳನ್ನು ದಿನನಿತ್ಯ ಇಂಜಕ್ಷನ್ ಮೂಲಕ, ಬಾಯಿ ಮೂಲಕ, ಸ್ಪರ್ಶ ಮೂಲಕ ಜನತೆ ತೆಗೆದುಕೊಳ್ಳುತ್ತಿದ್ದಾರೆ. ಮಾದಕ ವಸ್ತುಗಳು ಒಂದು ಸಲ ತೆಗೆದುಕೊಂಡಾಗ ಮತ್ತೆ ಮತ್ತೆ ತೆಗೆದುಕೊಳ್ಳುವ ವ್ಯಸನ ಪ್ರಾರಂಭವಾಗುತ್ತದೆ. ಇದರ ಕೆಟ್ಟ ಪರಿಣಾಮಗಳು ಘನಘೋರವಾಗಿರುತ್ತವೆ. ನಡತೆಕೆಡುವುದು, ಬಾಯಿ, ದವಡೆ, ನಾಲಿಗೆ, ಗಂಟಲಿಗೆ ಕ್ಯಾನ್ಸರ್ ಬರುವುದು, ಹೃದಯ, ಹೊಟ್ಟೆಮೇಲೆ, ಶ್ವಾಸಗಳ ಮೇಲೆ, ಮೆದುಳು ಮೇಲೆ ಪ್ರಭಾವ ಬೀರಲಿದೆ ಎಂದು ತಿಳಿಸಿದರು.

ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಂಯೋಜಕಿ ಶೈಲಶ್ರೀ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಲ್ಪತರು ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಚ್.ಜಿ.ಸುಧಾಕರ್ ಮತ್ತು ಉಪಾಧ್ಯಕ್ಷ ಜಿ.ಪಿ. ದೀಪಕ್ ಮಾದಕ ವಸ್ತುಗಳ ಕೆಟ್ಟ ಪರಿಣಾಮಗಳ ಬಗ್ಗೆ ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಚಿತ್ತರಂಜನ್ ರೈ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರೊ.ಜಿ.ಪಿ.ಸೋಮಶೇಖರಪ್ಪ, ಪ್ರೊ. ಎಂ.ಎಸ್.ತಿಪ್ಪೇಶ್, ಪ್ರೊ. ಎಂ.ಬಿ.ಶೈಲಜ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕನ್ನಡಪ್ರಭ - 18.1.22

Kannada prabha [Daily]

**TITLE OF THE ACTIVITY/EVENT: Drug-Free India Campaign**

**Date: 18-1-2022**

**Resource Person: Sri. Balakrishna Raj Nirchaal**

Report: Balakrishna raj said 80% of youth are becoming addicted to drugs, and the need of the hour is to prevent and address this menace among youth. He reminded the students that under the ministry of social justice and empowerment, the government of India launched the Nasha Mukt Bharat Abhiyan. He warned India's population is 140 crores, and 80% are addicted to one or the other drugs. And of that 80%, most of them are youth. He alerted that Cigarettes, ganja, hashish, opium, heroin, tobacco, and marijuana are the common drugs used in India. Drugs enter the body by smoking, swallowing, snorting, injecting, and suppositories. He advised it can cause cancer failure of organs such as the brain, heart and lungs. The natural defense mechanisms, such as the digestive and respiratory systems, fail. The whole family will be affected by it.

Samanvaya Samithi coordinator Shylashree gave the introductory speech.

Secretary Sri Sudhakara and Vice-president Sri Deepak Spoke on the result of drug abuse. Principal Chittaranjan Rai presided over the function. G.P. Somashekarappa, M.S. Thippesh, M.B. Shylaja and other faculty and students were present.

Scanned with OKEN Scanner

ಕಲ್ಪತರು ವಿದ್ಯಾ ಸಂಸ್ಥೆ (ರಿ), ತಿಪಟೂರು.

# ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

(ತುಮಕೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿಸಲಾಗಿದೆ ಮತ್ತು ನ್ಯಾಕ್ ನಿಂದ ಎ ಶ್ರೇಣಿ ಮಾನ್ಯತೆ ಪಡೆದಿದೆ.)

**2021-22 ನೇ ಶೈಕ್ಷಣಿಕ ವರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್.ಸಿ.ಸಿ. ಎನ್.ಎಸ್.ಎಸ್., ಇಕೋ ಕ್ಲಬ್, ಫಿಲ್ಮ್ ಕ್ಲಬ್, ಯುವ ರೆಡ್‌ಕ್ರಾಸ್ , ರೋವರ್ಸ್ - ರೇಂಜರ್ಸ್ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ**

**ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ**

# ಪ್ರತಿಭಾ ಶ್ರೀ - 2022

**ದಿನಾಂಕ : 20-09-2022 ನೇ ಮಂಗಳವಾರ**

**ಸಮಯ : ಬೆಳಿಗ್ಗೆ 10-30 ಗಂಟೆ** | **ಸ್ಥಳ : ಸೆಮಿನಾರ್ ಹಾಲ್**

ಅಧ್ಯಕ್ಷತೆ : **ಶ್ರೀ ಪಿ. ಕೆ. ತಿಪ್ಪೇರುದ್ರಪ್ಪ**
ಅಧ್ಯಕ್ಷರು, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.

ಮುಖ್ಯ ಅತಿಥಿಗಳು : **ಡಾ. ಶ್ರೀಧರ್**
ಖ್ಯಾತ ವೈದ್ಯರು, ಕುಮಾರ್ ಆಸ್ಪತ್ರೆ, ತಿಪಟೂರು

**ಶ್ರೀ ಉಮಾಶಂಕರ್ ಮಲ್ಲಿಗೆರೆ**
ಫೌಂಡರ್-ಮ್ಯಾನೇಜಿಂಗ್ ಡೈರೆಕ್ಟರ್, ಅಹನ ಸಿಸ್ಟಮ್ಸ್ & ಸಲ್ಯೂಶನ್ಸ್ ಪ್ರೈವೇಟ್.ಲಿ., ಬೆಂಗಳೂರು

**ವಿಶೇಷ ಆಹ್ವಾನಿತರು :**

| **ಉಪಾಧ್ಯಕ್ಷರುಗಳು** | **ಕಾರ್ಯದರ್ಶಿಗಳು** |
|---|---|
| ಶ್ರೀ ಜಿ. ಪಿ. ದೀಪಕ್ | ಶ್ರೀ ಹೆಚ್. ಜಿ. ಸುಧಾಕರ್ |
| ಶ್ರೀ ಟಿ. ಎಸ್. ಬಸವರಾಜು | ಶ್ರೀ ಟಿ. ಯು. ಜಗದೀಶ್‌ಮೂರ್ತಿ |
| ಶ್ರೀ ಬಾಗೇಪಲ್ಲಿ ನಟರಾಜು | ಶ್ರೀ ಜಿ. ಎಸ್. ಉಮಾಶಂಕರ್ |
| ಶ್ರೀ ಬಿ. ಎಸ್. ಉಮೇಶ್ | ಶ್ರೀ ಎಂ. ಆರ್. ಸಂಗಮೇಶ್ |

**ಶ್ರೀ ಟಿ. ಎಸ್. ಶಿವಪ್ರಸಾದ್**
ಖಜಾಂಚಿ, ಕಲ್ಪತರು ವಿದ್ಯಾ ಸಂಸ್ಥೆ, ತಿಪಟೂರು.

# ಸರ್ವರಿಗೂ ಹಾರ್ದಿಕ ಸುಸ್ವಾಗತ

**ಡಾ. ಚಿತ್ತರಂಜನ್ ರೈ** ಎಂ.ಎಸ್ಸಿ., ಪಿಹೆಚ್.ಡಿ.,
ಪ್ರಾಂಶುಪಾಲರು,
ಅಧ್ಯಾಪಕರು / ಅಧ್ಯಾಪಕೇತರುಗಳು ಮತ್ತು ವಿದ್ಯಾರ್ಥಿ ವೃಂದ
ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜು, ತಿಪಟೂರು.

Scanned with OKEN Scanner

ಬುಧವಾರ 21.9.2022

20/9/22

# ಅಡ್ಡ ಮಾರ್ಗದಲ್ಲಿ ಗೆಲುವಿನ ಹಾದಿ ಬೇಡ: ಶ್ರೀಧರ್

20-9-22


## ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇಜಿನಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ । ಸಾಧನೆ ಮಾಡಿದವರನ್ನು ಜನ ಬೇಗ ಗುರ್ತಿಸುತ್ತಾರೆ

**ಕನ್ನಡಪ್ರಭ ವಾರ್ತೆ** ತಿಪಟೂರು

ಡ್ಡ ಮಾರ್ಗದಲ್ಲಿ ಗೆಲುವಿನ ಹಾದಿ ಹಿಡಿಯದೆ, ಜೀವನ ಹತ, ಛಲ, ಪ್ರಾಮಾಣಿಕ, ಪರಿಶ್ರಮ, ಶ್ರದ್ಧೆ ಇದ್ದರೆ ದ್ಯಾರ್ಥಿಗಳಿಗೆ ಸಾಧನೆಯ ಮಾರ್ಗ ಸುಲಭ ಗಲಿದ್ದು, ಎಷ್ಟೇ ಏಳುಬೀಳುಗಳು ಬಂದರೂ ಮುನ್ನು ವ ಧೈರ್ಯ ಬೆಳೆಸಿಕೊಳ್ಳಬೇಕೆಂದು ನಗರದ ಕುಮಾರ್ ಸ್ಪತ್ರೆಯ ವೈದ್ಯ ಡಾ. ಶ್ರೀಧರ್ ವಿದ್ಯಾರ್ಥಿಗಳಿಗೆ ಳಿಸಿದರು.

ನಗರದ ಕಲ್ಪತರು ಪ್ರಥಮ ದರ್ಜೆ ವಿಜ್ಞಾನ ಕಾಲೇ ನಲ್ಲಿ ಮಂಗಳವಾರ ನಡೆದ 2021-22ನೇ ಶೈಕ್ಷಣಿಕ ರ್ಷದ ಸಾಂಸ್ಕೃತಿಕ ವೇದಿಕೆ, ವಿಜ್ಞಾನ ವೇದಿಕೆ, ಎನ್ ., ಎನ್‌ಎಸ್‌ಎಸ್, ಇಕೋ ಕ್ಲಬ್, ರೆಡ್‌ಕ್ರಾಸ್ ಇತರೆ ೕಡಾ ಚಟುವಟಿಕೆಗಳ ಸಮಾರೋಪ ಹಾಗೂ ಅಂತಿಮ ದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸಾಧನೆ ಮಾಡಿದವರನ್ನು ಜನರು ಬೇಗ ಗುರ್ತಿ ಸುತ್ತಾರೆ. ಸಾಧನೆಗೆ ಅಡ್ಡ ಮಾರ್ಗಗಳನ್ನು ಹಿಡಿಯದೆ ನ್ಯಾಯ ದಾರಿಯಲ್ಲಿ ನಡೆದು ತಂದೆ ತಾಯಿಗಳ ಬೆವರ ನಿಗೆ ಬೆಲೆಕೊಟ್ಟು ಸಾಧನೆ ಮಾಡಿದರೆ ನಿಮ್ಮನ್ನು ನೀವು ಗುರ್ತಿಸಿಕೊಳ್ಳುವ ಮೊದಲೇ ಸಮಾಜವೇ ನಿಮ್ಮನ್ನು ಗುರ್ತಿಸಲಿದೆ. ಇಂದಿನ ತಾಂತ್ರಿಕ ಜಗತ್ತಿನಲ್ಲಿ ಪಠ್ಯಕ್ಕೆ ಸೀಮಿತವಾಗದೆ ತಮ್ಮಲ್ಲಿರುವ ಕೌಶಲ್ಯಗಳನ್ನು ಬೆಳೆಸಿ ಕೊಂಡು ಪ್ರತಿಭೆಯನ್ನು ಅನಾವರಣ ಮಾಡಬೇಕು. ಸಾಧಿಸುವ ಅರಿವು ನಿಮ್ಮಲ್ಲಿ ಬಂದರೆ ನೀವು ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಗಳಾಗಿ ಇತರರಿಗೆ ಮಾದರಿಯಾಗಿ ಬೆಳೆಯ ಬಹುದು. ಜಗತ್ತನ್ನೆ ಮೆಟ್ಟಿ ನಿಲ್ಲುವ ಶಕ್ತಿ ನಿಮ್ಮಲ್ಲಿದ್ದು, ನಿಚ್ಚಳವಾದ ಸಾಧನೆ ಮಾಡಿದಾಗ ಜಗತ್ತೆ ನಿಂತು ನಿಮ್ಮನ್ನು ನೋಡುತ್ತದೆ. ಅದರಲ್ಲೂ ಕಲ್ಪತರು ವಿದ್ಯಾಸಂಸ್ಥೆಯನ್ನು ಕಟ್ಟಿ ಬೆಳೆಸಲು ಹಲವು ಹಿರಿಯ ಮಹನೀಯರು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದು, ಇಂತಹ ವಿದ್ಯಾ ಸಂಸ್ಥೆಯಲ್ಲಿ ಓದುತ್ತಿರುವ ನೀವು ಪುಣ್ಯವಂತರು ಎಂದ ಅವರು, ನಾನು ಸಹ ಇದೇ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದು ತನ್ನ ವಿದ್ಯಾಭ್ಯಾಸದ ಅವಧಿಯ ಬಗ್ಗೆ ಮೆಲುಕು ಹಾಕಿದರು.



ಸಮಾರೋಪ ಸಮಾರಂಭದ ಉದ್ಘಾಟನೆಯಲ್ಲಿ ಕುಮಾರ್ ಆಸ್ಪತ್ರೆಯ ಡಾ. ಶ್ರೀಧರ್ ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಉಮಾಶಂಕರ್ ಮಲ್ಲಿಗೆರೆ, ಕೆವಿಎಸ್ ಆಡಳಿತ ಮಂಡಳಿ ಮತ್ತಿತರರು.

ಕಾಲೇಜಿನ ಹಿರಿಯ ವಿದ್ಯಾರ್ಥಿ ಹಾಗೂ ಅಹನ ಸಿಸ್ಟಮ್ಸ್ ಮತ್ತು ಸಲ್ಯೂಶನ್ಸ್ ಫೌಂಡರ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಉಮಾಶಂಕರ್ ಮಲ್ಲಿಗೆರೆ ಮಾತನಾಡಿ, ಪ್ರಪಂಚ ವಿಶಾಲವಾಗಿದ್ದು ಎಲ್ಲಾ ಕ್ಷೇತ್ರಗಳಲ್ಲಿಯೂ ವಿಪುಲ ಅವಕಾಶಗಳಿವೆ. ಎಂಜಿನಿಯರಿಂಗ್, ಕಾನೂನು ಪದವಿ, ವಿಜ್ಞಾನ, ಕೃಷಿ ಹೀಗೆ ಹಲವು ಕ್ಷೇತ್ರಗಳಲ್ಲಿ ಉದ್ಯೋಗವಕಾಶಗಳಿದ್ದು ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಸಾಧಿಸಬೇಕಾದರೆ ಸಾಕಷ್ಟು ಅಡೆ ತಡೆಗಳು ಎದುರಾದರೂ ಅವುಗಳನ್ನು ಮೆಟ್ಟಿನಿಂತು ಯಶಸ್ಸನ್ನು ನಿಮ್ಮದಾಗಿಸಿಕೊಳ್ಳಬೇಕು. ನಿಮ್ಮ ಸಾಧನೆಯನ್ನು ತಂದೆ ತಾಯಿಗಳಿಗಷ್ಟೇ ಅಲ್ಲ ನಿಮ್ಮ ಸಂಸ್ಥೆಯೂ ಹೆಮ್ಮೆ ಪಡಲಿದ್ದು ವಿದ್ಯಾರ್ಥಿಗಳು ಪರಿಶ್ರಮದಿಂದ ಸಾಧನೆ ಮಾಡಬೇಕು. ಸಮಯವನ್ನು ವ್ಯರ್ಥ ಮಾಡದೆ ಕಲಿಕೆಯ ಅವಧಿಯಲ್ಲಿ ಕಲಿಕೆಗೆ ಹೆಚ್ಚು ಒತ್ತು ನೀಡಬೇಕು. ಹಿಂಜರಿಕೆ, ಭಯದ ಭಾವನೆಗಳನ್ನು ಬಿಟ್ಟು ಆತ್ಮ ಮತ್ತು ಮನೋಬಲದಿಂದ ಅತ್ಯುತ್ತಮ ಶಿಕ್ಷಣ ಪಡೆದು ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು ಎಂದರು.

> ಸಾಧಕರುಗಳ ಮಾತುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಎಲ್ಲಾ ವಿದ್ಯಾರ್ಥಿಗಳು ಸಾಧನೆಯ ಹಾದಿಯಲ್ಲಿ ನಡೆಯಬಹುದು. ಸಾಧನೆಯನ್ನು ಸಾಧಿಸುವ ಮಾರ್ಗ ಸುಲಭವಾಗಿರುವುದಿಲ್ಲ, ಅಲ್ಲಿ ಬರುವಂತಹ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ಮುನ್ನುಗ್ಗಿದಾಗ ಮಾತ್ರವೇ ಯಶಸ್ಸು ಸಾಧಿಸಬಹುದು.
>
> • **ಜಿ.ಪಿ.ದೀಪಕ್** ಕೆವಿಎಸ್ ಉಪಾಧ್ಯಕ್ಷ

ಪ್ರಾಂಶುಪಾಲ ಡಾ. ಚಿತ್ತರಂಜನ್ ರೈ ಕಾಲೇಜಿನ ವಾರ್ಷಿಕ ವರದಿ ಮಂಡಿಸಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಉತ್ತಮವಾಗಿರಲಿ. ಸ್ವಾವಲಂಬಿಗಳಾಗಿ ಬದುಕನ್ನು ರೂಪಿಸಿಕೊಂಡು ಕಾಲೇಜು, ಹೆತ್ತವರ ಹಾಗೂ ಕಲಿಸಿದವರ ಕೀರ್ತಿ ಪತಾಕೆಯನ್ನು ಹಾರಿಸಿ ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಕೆವಿಎಸ್ ಉಪಾಧ್ಯಕ್ಷರಾದ ಬಾಗೇಪಲ್ಲಿ ನಟರಾಜು, ಬಿ.ಎಸ್. ಉಮೇಶ್, ಕಾರ್ಯದರ್ಶಿ ಎಚ್.ಜಿ. ಸುಧಾಕರ್, ಖಜಾಂಚಿ ಟಿ. ಎಸ್. ಶಿವಪ್ರಸಾದ್, ಪ್ರಾಂಶುಪಾಲರಾದ ಡಾ. ವಿ. ಮಾಲತಿ, ಗೀತಾಲಕ್ಷ್ಮಿ ಸೇರಿದಂತೆ ಅಧ್ಯಾಪಕರು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿ ಇದ್ದರು. ದೈಹಿಕ ಶಿಕ್ಷಕ ಲಿಖಿತ್ ಕ್ರೀಡಾ ವರದಿ ವಾಚಿಸಿದರು. ನಂತರ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕ್ರೀಡೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

Kannada Prabha Daily
Date: 20.09.2022

**TITLE OF THE ACTIVITY/EVENT: College Day**

**Date:**

**Resource Person: Dr. Sreedhar, Kumara Hospital. Tiptur**

**Shri Umashankar Malligere, Managing Director of Ahana Systems and Solutions, Bangalore**

Report: Dr. Sreedhar said determination, honesty, hard-working and discipline could make your dream come true. There will be obstacles, but one should overcome them.

Umashankar said people recognize famous people and what they have achieved in their life. He said one must follow the right way, not the easy, immoral, or illegal manner. Parents send their children to college with great difficulty. If you value their hardship, then you will be successful. It would be best if you recognized the hidden talent. One should go beyond the syllabus and be talented in the technological world. He said you should not run after success or recognition. It must come to you on its own. The Kalpataru Vidya Samsthe has grown to this level through the vision and spirit of the great people. He remembered his heydays in college. He said you should consider yourself lucky for studying here. He expressed that the world is vast, and all the fields have opportunities for engineering, science, and agriculture, and the students should use them.

Dr. Chittaranjan Rai read the college report. KVS Vice President Bhagyapalli Nataraj, B.S. Umesh, Secretary Sudhakar, Treasurer Shivaprasad, and principals of other institutions were present. Rank holders were honoured, and the sports and cultural event winners were given prizes.

Scanned with OKEN Scanner